ವಿಷಯ: ಸರ್ಕಾರಿ ಸೇವೆಯಲ್ಲಿರುವಾಗಲೇ ಮೃತರಾದವರ ಅವಲಂಬಿತರಿಗೆ ನೌಕರಿ ನೀಡುವ ಬಗ್ಗೆ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1553 (1789)

ಶ್ರೀ ಎನ್. ಜಿ. ನಾಯಕ್ (ಮೊಳಕಾಲ್ಮೂರು):- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

ಅ ಶಿಕ್ಷಣ ಇಲಾಖೆಯಲ್ಲಿ ನೌಕರಿ ಸಲ್ಲಿಸುತ್ತಿದ್ದು ಸೇವೆಯಲ್ಲಿರುವಾಗಲೇ ಮೃತರಾದವರ ಅವಲಂಬಿತರು ಅನುಕಂಪದ ನೌಕರಿಗಾಗಿ ಸಲ್ಲಿಸಿರುವ ಮನವಿಗಳಲ್ಲಿ ಕೆಲವರಿಗೆ ನಿಯಮ ಪಡಿಲಿಸಬೇಕಾಗಿರುವುದು ನಿಜವಲ್ಲವೆ.

ಆ ಹಾಗಿದ್ದಲ್ಲಿ ಎಷ್ಟು ಮನವಿಗಳು ಬಾಕಿ ಉಳಿದಿರುತ್ತವೆ (ಮನವಿಗಳು ಸಚಿವಾಲಯಕ್ಕೆ ತಲುಪಿದ ದಿನಾಂಕದೊಂದಿಗೆ ಅರ್ಜಿದಾರರ ವಿವರಗಳನ್ನು ಪ್ರತ್ಯೇಕವಾಗಿ ನೀಡುವುದು)

ಇ ಮೇಲಿನಂತೆ ನಿಯಮವನ್ನು ಸಡಜಿಲಿಸಿರುವುದರ ದೃಷ್ಟಿಯಲ್ಲಿ ಅನುಕಂಪದ ಆಧಾರದ ಮೇಲೆ ಸಂಬಂಧಿಸಿದವರನ್ನು ನೇಮಕಾತಿ ಮಾಡುವ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಎಂ.ವೀರಪ್ಪ ಮೊಯಿಲಿ, (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ ನಿಯಮವನ್ನು ಪಡಿಲಿಸಿ ಕಾಲ ವಿಳಂಬ ಮನ್ನಾ ಮಾಡಿ ಅನುಕಂಪದ ಆಧಾರದ ಮೇಲೆ ನೇಮಕಾತಿ ಕೊಡುವಂತೆ ಕೋರಿ ಅರ್ಜಿಗಳು ಬಂದಿವೆ.

ಆ 33 ಪ್ರಕರಣಗಳು (ಪಟ್ಟಿ ಲಗತ್ತಿಸಿದೆ)

ಇ ಈ ಪ್ರಕರಣಗಳನ್ನು ಸಚಿವ ಸಂಪುಟದ ಮುಂದೆ ತಂದಾಗ ಈ ಪ್ರಕರಣಗಳನ್ನು ಅರ್ಹತೆಯ ಮೇಲೆ ಪರಿಶೀಲಿಸಿ ಸಚಿವ ಸಂಪುಟದ ಆದೇಶಕ್ಕಾಗಿ ಸಲ್ಲಿಸಬೇಕೆಂದು ಆದೇಶಿಸಿರುವುದರಿಂದ ಈ ಬಗ್ಗೆ ಪ್ರತಿಯೊಂದು ಪ್ರಕರಣವನ್ನು ಅರ್ಹತೆಯ ಮೇಲೆ ಪರಿಶೀಲಿಸಿ ಸಚಿವ ಸಂಪುಟದ ಮುಂದೆ ತರುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

List of delay condonation cases

Sl. No	Candidate name & relationship with deceased Govt. Servant.	Date of submission of application	Delay in submitting application	Received on in Secretariat
1	Sri Yogish Son	27-01-85	5 years	09-04-90
2	Sri Basavaraj Son	13-01-88	6 year 6 months	03-12-90
3	Sri Sangappa Siddappa Saidapur Son	20-04-87	4 years	05-01-91
4	Sri M.S.Dayananda Murthy Son	28-08-90	3 years 3 months	14-02-91
5	Sri Sadashiva Balegar Son	28-10-88	4 years 5 months 8 days	05-01-91
6	Sri Shashidara Malla Chabbi Son	20-06-88	5 years	19-06-90
7	Sri B.Parameswaraiah Son	24-08-87	3 months 4 days	14-06-90

8	Sri B.B.Budihal Son	17-08-87	1year 2 months 16 days	02-05-91
9	Sri Shivappa Son	12-10-84	9 years	03-04-90
10	Sri P.S.Rajashekara,Son	19-05-88	3 years 8 months	31-05-90
11	Sri Virupakshagowda Son	11-04-88	2 years 10 months	17-01-90
12	Sri K.R.Gowrishankar murthy, Brother-in-law	06-07-89	7 months	06-12-90
13	Sri H.S.Guruprasad Son	02-03-85	9 years	27-12-90
14	Sri T.Manjunath Son	07-06-90	4 years 1 month	16-01-91
15	Sri M.S.Giri Son	29-06-90	11 months	13-01-91
16	Sri M.M.Biddappa Brother-in-law	15-01-90	8 months 14 days	27-05-91
17	Smt Thabitha Joseph Daughter	April 87	9 years	03-10-91
18	Sri K.S.Prakash	07-02-88	1 year 11 month 21 days	12-09-90
19	Sri Ashok Kumar setti Son	12-07-88	6 year 2 months 21 days	26-05-90
20	Smt Shantha Bai Wife	07-12-87	2 years 2 months	15-09-89
21	Sri Mahadevaswamy Brother-in-law	15-02-87	8 years 1 month	12-03-90
22	Sri B.Ganeshappa Son	18-02-89	6 years 2month 9 day	20-08-91
23	Sri Manjunath Son	20-12-87	1 year 2 month 26 day	11-09-90
24	Sri Krishna Rao Brother-in-law	03-09-86	6 year 7 month 24 day	16-12-91
25	Sri Amzad Khan Brother-in-law	02-05-88	4 months 6 days	06-04-91
26	Sri Sharanappa Dundappa Muddina, Brother-in-law	02-11-89	1 year 5 month 3 day	06-04-91
27	Sri Pajalur Rehaman Son	11-11-87	5 year 5 month 11 day	28-11-90
28	Sri Naganagowda Madivalappa gaddennavar Son	09-07-90	2 years	30-10-91
29	Sri Hanumanthappa Satyappa Gollaratti Son	06-10-87	6 year 4 month 26 day	09-09-91
30	Sri Annaiah Son		9 years	04-11-91
31	Sri I.S.Prabhu Son	21-04-81	1 year 4 month	24-12-91
32	Sri Manjunath Son	Reply awaited		23-02-91

33 Sri Neelakantaiah Son Reply awaited 16-08-91

ವಿಷಯ: ಶಾಲೆಗಳಲ್ಲಿ "ಡಿ"ಗುಂಪಿನ ನೌಕರರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1554 (2126)

ಶ್ರೀ ಶಿವಶೇಖರಪ್ಪಗೌಡ, ಶಿರವಾಳ (ಶಹಾಪುರ):- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಪ್ರೌಢಶಾಲೆ ಹಾಗೂ ಪ್ರಾಥಮಿಕ ಶಾಲೆಗಳಲ್ಲಿ ಎಡು ಗುಂಪಿನ ನೌಕರರು ನಿವೃತ್ತರಾದ ನಂತರ ಸದರಿ ಹುದ್ದೆಗಳನ್ನು ಭರ್ತಿ ಮಾಡದಿರುವುದು ನಿಜವಲ್ಲವೆ.

ಆ ಇದರಿಂದ ಶಾಲೆಗಳಿಗೆ ತೊಂದರೆಯಾಗಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಇ ಈಗಲಾದರೂ ಸರ್ಕಾರದವರು ಶಾಲೆಗಳಿಗೆ "ಡಿ" ಗುಂಪಿನ ನೌಕರರನ್ನು ನೇಮಕ ಮಾಡುವ ಮೂಲಕ ಮೇಲ್ಕಂಡ ಶಾಲೆಗಳಿಗಾಗುತ್ತಿರುವ ತೊಂದರೆಯನ್ನು ತಪ್ಪಿಸುವರೇ?

ಶ್ರೀ ಎಂ.ವೀರಪ್ಪ ಮೊಯಿಲಿ, (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳಸಚಿವರು)

ಅ ಆರ್ಥಿಕ ಮಿತವ್ಯಯ ಜಾರಿಯಲ್ಲಿರುವುದರಿಂದ ಬೋದಕೇತರ ಹುದ್ದೆಗಳನ್ನು ಭರ್ತಿ ಮಾಡಲು ಅವಕಾಶವಿಲ್ಲವಾದ್ದರಿಂದ ರಾಜ್ಯದ ಯಾವುದೇ ಭಾಗದಲ್ಲಿನ ಗ್ರೂಪ್ "ಡಿ" ನೌಕರರ ಹುದ್ದೆಗಳನ್ನು ಭರ್ತಿ ಮಾಡಲು ಅವಕಾಶವಿರುವುದಿಲ್ಲ.

ಆ ಅನುಕಂಪದ ಆಧಾರದ ಮೇಲೆ ಗ್ರೂಪ್ "ಡಿ" ನೌಕರರ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿರುವುದರಿಂದ ಶಾಲೆಗಳಿಗೆ ತೊಂದರೆಯಾಗಿಲ್ಲ.

ಇ (2)ರಲ್ಲಿನ ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಛೇರ್ಮನ್:- ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಮಂಡಿಸಲಾಯಿತು.

334ನೇ ನಿಯಮದ ಮೇರೆಗೆ.

ವಿಷಯ: ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಹಳ್ಳಿಗಳಿಗೆ ಏತ ನೀರಾವರಿ ಸೌಲಭ್ಯಗಳನ್ನು ಒದಗಿಸುವ ಬಗ್ಗೆ.

ಶ್ರೀ ಟಿ. ಜಿ. ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಅಂಬಾಕೊಪ್ಪ, ಕುದರೆ ಹೊಸೂರು, ಸುರಗಿಹಳ್ಳಿ,ಹಾರ್ನಳ್ಳಿ ಮತ್ತು ತಂಬಿನ ಕಟ್ಟೆ ಗ್ರಾಮಸ್ಥರು ಸುಮಾರು 10-15 ವರ್ಷಗಳಿಂದ ಬರಗಾಲ ಅನುಭವಿಸುತ್ತಾ ಬಂದಿರುತ್ತಾರೆ. ಈ ಗ್ರಾಮಗಳ ಪಕ್ಕದಲ್ಲಿಯೇ ಹರಿಯುವ ಕುಮದ್ವತಿ ನದಿಗೆ ಏತ ನೀರಾವರಿ ಮಾಡಿ ಹತ್ತಿರವಿರುವ ಕೊಪ್ಪದ ಕೆರೆಗೆ ನೀರನ್ನು ತುಂಬುವಂತೆ ಮಾಡಿದಲ್ಲಿ ಬೇಸಿಗೆಯಲ್ಲೂ ಸಹ ಮೇಲ್ಕಂಡ 5 ಗ್ರಾಮಗಳ ಸಾವಿರಾರು ಎಕರೆ ಜಮೀನು ನೀರಾವರಿಯಾಗುತ್ತದೆ. ಇವರು ಅನೇಕ ಬಾರಿ ಮನವಿಯನ್ನು ಸಲ್ಲಿಸಿದ್ದರೂ ಸಹ ಇದರ ಬಗ್ಗೆ ಸರ್ಕಾರವು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಈ ದಿಸೆಯಲ್ಲಿ ಸದರಿ ಹಳ್ಳಿಗಳ ಜನತೆಯು ಮುಷ್ಕರ ಹೂಡಿರುವುದನ್ನು ಸದನದ ಗಮನಕ್ಕೆ ಹಾಗೂ ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಕೆ.ಎಸ್.ಮಲ್ಲಿಕಾರ್ಜುನ ಪ್ರಸನ್ನ:- (ಸಣ್ಣ ನೀರಾವರಿ ರಾಜ್ಯಸಚಿವರು) ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ನಾನು ಮಾನ್ಯ ಶಾಸಕರ ಹತ್ತಿರ ಪ್ರತ್ಯೇಕವಾಗಿ ಮಾತನಾಡಿ ಏನು ಸಮಸ್ಯೆ ಇದೆ ಅದನ್ನು ಬಗೆಹರಿಸುತ್ತೇನೆನ್ನುವ ಮಾತನ್ನು ಹೇಳುತ್ತೇನೆ.

ವಿಷಯ:- ಮಲ್ಲೇಶ್ವರ, ಯಶವಂತಪುರ, ರಾಜಾಜಿನಗರಗಳಿಂದ ಶಿವಾಜಿನಗರಕ್ಕೆ ಹೋಗುವ ಬಸ್ಸುಗಳ ಮಾರ್ಗವನ್ನು ಬದಲಿಸುವ ಬಗ್ಗೆ.

ಶ್ರೀ ರಾಮಲಿಂಗರೆಡ್ಡಿ (ಜಯನಗರ):- ಮಾನ್ಯ ಅಧ್ಯಕ್ಷರೇ ಈಗ ಮಲ್ಲೇಶ್ವರ, ಯಶವಂತಪುರ,